www.ecourtsindia.com



ದಿನಾಂಕ **18-09-2024** ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲು **3** ನೇ ಎದುರುದಾರರ ಪರ ವಕೀಲರಿಂದಃ-

ನಾನು 25 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದೇನೆ. ಅದರ ಜೊತೆಗೆ ಕಟಿಂಗ್ ಅಂಗಡಿ ಕೂಡ ಇಟ್ಟುಕೊಂಡಿದ್ದೇನೆ. 2 ನೇ ಅರ್ಜಿದಾರರಾದ ಮಲ್ಲಿಕಾರ್ಜುನ ಇವರು ನನ್ನ ಅಣ್ಣ ಇರುತ್ತಾರೆ. ಅವರು ಕುಲವೃತ್ತಿಯ ಜೊತಗೆ ವ್ಯವಸಾಯ ಕೂಡ ಮಾಡುತ್ತಾರೆ. ನಮಗೆ ಕುಲವೃತ್ತಿಯಿಂದ ಮತ್ತು ವ್ಯವಸಾಯದಿಂದ ಕೂಡ ಆದಾಯ ಇದೆ ಎಂದರೆ ಸರಿ. 1 ನೇ ಅರ್ಜಿದಾರರು ನಮ್ಮ ತಾಯಿ. ನನ್ನ ತಂದೆ-ತಾಯಿಗೆ ಒಟ್ಟು 3 ಜನ ಮಕ್ಕಳು ಇದ್ದು ಅದರಲ್ಲಿ ತಿಪ್ಪೇಸ್ವಾಮಿ ಎಂಬುವವರು ತೀರಿಕೊಂಡಿದ್ದಾರೆ ಅವರಿಗೆ ಹೆಂಡತಿ-ಮಕ್ಕಳು ಇದ್ದಾರೆ. ಆತನ ಹೆಂಡತಿಯ ಹೆಸರು ಅಂಭಿಕ, ಮಕ್ಕಳ ಹೆಸರು ಮನು ಮತ್ತು ಸ್ವಾತಿ ಇರುತ್ತದೆ.

ಸದರಿಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅಪಘಾತವನ್ನು ನಾನು ನನ್ನ ಕಣ್ಣಾರೆ ನೋಡಿಲ್ಲ ಎಂದರೆ ಸರಿ, ಸ್ಥಳೀಕರು ಫೋನ್ ಮಾಡಿ ನನಗೆ ತಿಳಿಸಿದ್ದಾರೆ. ದೂರನ್ನು ನನ್ನ ಅಣ್ಣ ಅಂದರೆ 2 ನೇ ಅರ್ಜಿದಾರರು ಕೊಟ್ಟಿದ್ದಾರೆ ಎಂದರೆ ಸರಿ. ಆತನೂ ಕೂಡ ಘಟನೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರಿಗೆ ಅಪಘಾತದ ಸ್ಥಳವನ್ನು ನನ್ನ ಅಣ್ಣ ತೋರಿಸಿದ್ದಾನೆ. ನನ್ನ ತಂದೆ ರಸ್ತೆಯ ಮದ್ಯ ಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅವರು ಫುಟ್ಪಾತ್ ಉಪಯೋಗಿಸಿದ್ದರೆ ಅಪಘಾತ ಆಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ಅಪಘಾತ ಆದ ತಕ್ಷಣ ನಾನೇ ಮೊದಲಿಗೆ ನನ್ನ ತಂದೆಯನ್ನು ತರೀಕೆರೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ನನ್ನ ಮಕ್ಕಳೂ ಕೂಡ ಇದ್ದರು. ಅಪಘಾತ ಆಗಿದೆ ಎಂದು ಮಾತ್ರ ವೈದ್ಯರಿಗೆ ಹೇಳಿದ್ದೇವೆ ಅವರಿಗೆ ವಿವರಗಳನ್ನು ಹೇಳಿಲ್ಲ. ಮೆಗ್ಗಾನ್ ಆಸ್ಪತ್ರೆಯಲ್ಲಿ ನನ್ನ ತಂದೆಯ ಜೊತೆ ನಾನು ಮತ್ತು ನನ್ನ ಮಗ ಇದ್ದೆವು. ಅಲ್ಲಿಯ ವೈದ್ಯರಿಗೆ ಅಪಘಾತದ ಬಗ್ಗೆ ವಿವರಗಳನ್ನು ಕೊಟ್ಟಿದ್ದೇವೆ. ವಾಹನದ ವಿವರಗಳನ್ನು ತಿಳಿಸಿಲ್ಲ. ಅಪಘಾತ ಆದ ದಿವಸವೇ ಮೆಗ್ಗಾನ್ ಆಸ್ಪತ್ರೆಯಲ್ಲಿ ನನ್ನ ತಂದೆ ತೀರಿಕೊಂಡರು. ಮೆಗ್ಗಾನ್ ಆಸ್ಪತ್ರೆಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ನಮಗೆ ಅಪಘಾತಪಡಿಸಿದೇ ಎನ್ನಲಾಗುವ ವಾಹನದ ಚಾಲಕನಿಗೆ ಚಾಲನ ಪರವಾನಗಿ ಇರಲಿಲ್ಲ ಎಂದು ಪೊಲೀಸರು ಅಂತಿಮ ವರದಿಯಲ್ಲಿ ತಿಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3. ನನ್ನ ತಂದೆ ಕೂಡ ವ್ಯವಸಾಯದೊಂದಿಗೆ ಕುಲವೃತ್ತಿಯನ್ನು ಅಂದರೆ ಕ್ಷೌರಿಕ ವೃತ್ತಿಯನ್ನು ಮಾಡುತ್ತಿದ್ದರು. ಜಮೀನಿನ ಪಹಣಿ ಪತ್ರಿಕೆಗಳು ನನ್ನ ಅಣ್ಣನ ಹೆಸರಿನಲ್ಲಿ ಇವೆ. ನನ್ನ ತಂದೆಯು ತೀರಿಕೊಂಡ ನಂತರ ಜಮೀನಿನಿಂದ ಬರುವ ಆದಾಯದಲ್ಲಿ ವ್ಯತ್ಯಾಸ ಆಗಿಲ್ಲ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಾನು ಪಹಣಿ ಪತ್ರಿಕೆಯನ್ನು ಕೊಟ್ಟಿಲ್ಲ. ಮೊದಲಿನಂತೆಯೇ ಕೂಡ ಈಗಲೂ ಜಮೀನಿನಿಂದ ಅದೇ ಆದಾಯ ಬರುತ್ತಿದೆ ಆ ಕಾರಣಕ್ಕೆ ನಾನು

This is a True Copy of the Court Records Online. Authenticated @ districts.ecourtsindia.com/cnr/KACM700006322023/truecopy/order-4.pdf

ಪಹಣಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣ ನಂತರ ಕೂಡ ನಾನು ಮತ್ತು ನನ್ನ ಅಣ್ಣ ಕ್ಷೌರಿಕ ವೃತ್ತಿಯನ್ನುಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ನಾವು ಬೇರೆ ಬೇರೆಯಾಗಿ ಜೀವನ ನಡೆಸುತ್ತೇವೆ. ನನ್ನ ದುಡಿಮೆಯಿಂದ ನನ್ನ ಸಂಸಾರ, ನನ್ನ ಅಣ್ಣನ ದುಡಿಮೆಯಿಂದ ಆತನ ಸಂಸಾರ ನಡೆಯುತ್ತಿದೆ ಎಂದರೆ ಸರಿ. ನನ್ನ ತಾಯಿಯನ್ನು ನಾನೇ ನೋಡಿಕೊಳ್ಳುತ್ತೇನೆ. ನನ್ನ ತಂದೆ ಬದುಕಿದ್ದಾಗಲೂ ಕೂಡ ಅವರನ್ನು ಮತ್ತು ನನ್ನ ತಾಯಿಯನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ನನ್ನ ತಂದೆ ಮತ್ತು ತಾಯಿ ನನ್ನ ಮತ್ತು ನನ್ನ ಅಣ್ಣನ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿ. ನನ್ನ ಮೃತ ಅಣ್ಣನ ಹೆಂಡತಿ ಮಕ್ಕಳನ್ನು ಉದ್ದೇಶ ಪೂರ್ವಕವಾಗಿ ಅರ್ಜಿಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ತಂದೆಯ ತಪ್ಪಿನಿಂದ ಆಗಿರುವ ಕಾರಣ ವಿಮಾ ಕಂಪನಿಯವರು ಯಾವುದೇ ಪರಿಹಾರ ಕೊಡಲು ಭಾದ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಎಂ.ಎ.ಸಿ.ಟಿ., ತರೀಕೆರೆ.

This is a True Copy of the Court Records Online. Authenticated @ districts.ecourtsindia.com/cnr/KACM700006322023/truecopy/order-4.pdf